**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ**

**ಶಹಾಪೂರ**

**ಸಿ.ಸಿ ನಂಃ 967/2019**

**ಫಿರ್ಯಾದಿದಾರಃ** ಕರ್ನಾಟಕ ಸರ್ಕಾರ ಶಹಾಪೂರ ಠಾಣೆ ಪೊಲೀಸರು.

// ವಿರುದ್ಧ //

**ಆರೋಪಿ** : ಮೆಹಬೂಬ ತಂದೆ ಲಾಲಅಹ್ಮದ ನಾಯ್ಕೋಡಿ
ವಯಾಃ 25 ವರ್ಷ, ಉಃ ಕೂಲಿ
ಸಾಃ ಶಿರವಾಳ, ತಾಃ ಶಹಾಪೂರ, ಜಿಃ ಯಾದಗಿರಿ.

**ದಂಡ ಪ್ರಕ್ರೀಯಾ ಸಂಹಿತೆ ಕಲಂಃ 313 ರಡಿಯಲ್ಲಿ ಆರೋಪಿತರ ಹೇಳಿಕೆ.**

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

ಉತ್ತರಃ

ಪ್ರ-02. ಪ್ರಾಸಾ-3 ಮಹ್ಮದ ಸುಬಾನಿ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ20.03.2019 ರಂದು ಮಃ12.00 ಗಂಟೆಗೆ ತಾನು ಮತ್ತು ಚಾಸಾ-1, 4 ರವರ ಸೇರಿಕೊಂಡ ತಮ್ಮ ಇಲಾಖಾ ವಾಹನದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ-1 ರವರಿಗೆ ಒಬ್ಬ ವ್ಯಕ್ತಿಯು ಶಿರವಾಳ ಗ್ರಾಮದಿಂದ ಅಣಬಿ ಕಡೆಗೆ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯವನ್ನು ಸಾಗಾಣಿಕೆ ಮಾಡುವ ಕುರಿತು ಖಚಿತ ಬಾತ್ಮಿ ಬಂದಿರುತ್ತದೆ. ಸದರಿ ಬಾತ್ಮಿಯ ಬಗ್ಗೆ ಚಾಸಾ-1 ರವರ ತನಗೆ ಮತ್ತು ಚಾಸಾ-4 ರವರಿಗೆ ತಿಳಿಸಿರುತ್ತಾರೆ. ನಂತರ ತಾನು ಚಾಸಾ-1 ಮತ್ತು 4 ರವರ ಸೇರಿಕೊಂಡು ಶಿರವಾಳ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಚಾಸಾ-2 ಮತ್ತು 3 ರವರನ್ನು ಪರಿಚಯ ಮಾಡಿಕೊಂಡು ಸದರಿ ಪ್ರಕರಣದಲ್ಲಿ ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿ ಕೊಂಡಿರುತ್ತಾರೆ. ನಂತರ ಪಂಚರು ಹಾಗೂ ಚಾಸಾ-1 ಮತ್ತು 4 ಹಾಗೂ ತಾನು ಎಲ್ಲರೂ ಸೇರಿಕೊಂಡು ಮುಚಬೋಳ ಕ್ರಾಸ್ ಹತ್ತಿರ ವಾಹನಕ್ಕಾಗಿ ಕಾಯುತ್ತಾ ನಿಂತಾಗ ತಮ್ಮ ಎದುರುಗಡೆಯಿಂದ ಕೆಂಪು ಬಣ್ಣದ ಒಂದು ದ್ವಿಚಕ್ರ ವಾಹನ

ಬರುತ್ತಿರುವುದು ಕಂಡು ಬಂದಿದು ತಾವು ಸದರಿ ವಾಹನವನ್ನು ನಿಲ್ಲಿಸುವಂತೆ ಕೈ ಮಾಡಿದಾಗ ಆ ವ್ಯಕ್ತಿಯು ತಮ್ಮನ್ನು ನೋಡಿ ದ್ವಿಚಕ್ರ ವಾಹನವನ್ನು ನಿಲ್ಲಿಸಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-03. ಪ್ರಾಸಾ-3 ರವರು ಮುಂದುವರೆದು ತಮಗೆ ಅನುಮಾನ ಬಂದು ವಾಹನದ ಹತ್ತ್ರಿರ ಹೋಗಿ ಚಾಸಾ-1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಶೋಧನಾ ಪತ್ರವನ್ನು ತಯಾರಿಸಿ ವಾಹನವನ್ನು ಪರಿಶೀಲನೆ ಮಾಡಿದಾಗಿ ಅದು ಕೆಂಪು ಬಣ್ಣದ ಯಮಹಾ ಜಿ.ಎಸ್ ಕೆಎ-32-ಡಬ್ಲ್ಯೂ 5474 ಕಂಡು ಬಂದಿದ್ದು ನಂತರ ದ್ವಿಚಕ್ರ ವಾಹನದ ಹಿಂದಿನ ಸೀಟಿನ ಮೇಲೆ ಒಂದು ಬಿಚಿ ಪ್ಲಾಸ್ಟಿಕ ಚೀಲ ಕಂಡು ಬಂದಿದು ಅದರಲ್ಲಿ 90 ಎಂ.ಎಲ್ ನ ಒ.ಸಿ 192 ಟೆಟ್ರಾ ಪಾಕೆಟಗಳು ಕಂಡು ಬಂದಿದ್ದು ಆರೋಪಿತನನ್ನು ಸದರಿ ಟೆಟ್ರಾ ಪಾಕೆಟಗಳನ್ನು ಸಾಗಾಣಿಕೆ ಮಾಡಲು ಯಾವುದಾದರು ಪರವಾನಿಗೆ ಇದೆ ಎಂದು ಕೇಳಿದಾಗ ಆರೋಪಿತನು ತನ್ನ ಬಳಿ ಯಾವುದೇ ಪರವನಿಗೆ ಇಲ್ಲದೇ ಇರುವುದು ತಿಳಿಸಿರುತ್ತಾನೆ. ನಂತರ ಚಾಸಾ-1 ರವರು ಸ್ಥಳದಲ್ಲಿದ್ದ ಎಲ್ಲ ಟೆಟ್ರಾ ಪಾಕೆಟಗಳನ್ನು ಜಪ್ತಿ ಪಡಿಸಿಕೊಂಡು ಅದರಲ್ಲಿ ರಾಸಾಯನಿಕ ಪರಿಕ್ಷೆಗಾಗಿ 26 ಟೆಟ್ರಾ ಪಾಕೆಟಗಳನ್ನು ತೆಗೆದುಕೊಂಡು ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗ ಸೀಲ 630 ರಿಂದ ಮುದ್ರೆ ಹಾಕಿ ಚಾಸಾ-1 ಮತ್ತು ಪಂಚರ ಸಮಕ್ಷಮ ಮಾದರಿ ಮುದ್ರೆಮನ್ನು ತಯಾರಿಸಿ ತಮ್ಮ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ಪಂಚನಾಮೆಯನ್ನು ಮಃ 01.30 ರಿಂದ 02.30 ರವರೆಗೆ ತಯಾರಿಸಿರುತ್ತಾರೆ . ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-04. ಪ್ರಾಸಾ-4 ಮರುತಿ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 06.05.2019 ರಂದು ಸದರಿ ಪ್ರಕರಣದಲ್ಲಿ ಮು.ಮಾಲುಗಳನ್ನು FSL ಗೆ ತೆಗೆದುಕೊಂಡು ಹೋಗಿ ಅದರ ವರದಿಯನ್ನು

ತನಿಖಾಧಿಕಾರಿಗೆ ತಂದು ಕೊಟ್ಟಿರುತ್ತಾನೆ, ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-05. ಪ್ರಾಸಾ-5 ಜಟ್ಟೆಪ್ಪ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 20.03.2019 ರಂದು ತಾನು ಸದರಿ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದುಕೊಂಡು ಪರಿಶೀಲಿಸಿ ಅದೇ ದಿವಸ ಚಾಸಾ-4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾನೆ. ದಿಃ 06.05.2019 ರಂದು ಸದರಿ ಪ್ರಕರಣದ ಮಾದರಿ ಮು.ಮಾಲುಗಳನ್ನು ಚಾಸಾ-6 ರವರ ಕಡೆಯಿಂದ FSL ಗೆ ಕಳುಹಿಸಿ ಕೊಟ್ಟು, ದಿಃ 08.05.2019 ರಂದು ಸದರಿ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ವಾಹನದ ಮಾಲೀಕತ್ವ ಕುರಿತು RTO ಯಾದಗಿರಿ ಯವರಿಗೆ ಪತ್ರ ಬರೆದಿರುತ್ತಾನೆ. ದಿಃ 27.05.2019 ರಂದು ಚಾಸಾ-6 ರವರಿಂದ ರಾಸಾಯನಿಕ ವರದಿಯನ್ನು ಪಡೆದುಕೊಂಡಿರುತ್ತಾನೆ. ದಿಃ 29.05.2019 ರಂದು RTO ಯಾದಗಿರಿ ಯಿಂದ ವಾಹನದ ಮಾಲೀಕತ್ವದ ವರದಿಯನ್ನು ಪಡೆದುಕೊಂಡಿರುತ್ತಾನೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತನ ವಿರುದ್ಧ ದಿಃ 07.06.2019 ರಂದು ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-06. ಪ್ರಾಸಾ-6 ಅಬುಬಕರ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 20.03.2019 ರಂದು ಮಃ 12.00 ಗಂಟೆಗೆ ತಾನು ಮತ್ತು ಚಾಸಾ-4, 5 ರವರು ಸೇರಿಕೊಂಡ ತಮ್ಮ ಇಲಾಖಾ ವಾಹನದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ತನಗೆ ಒಬ್ಬ ವ್ಯಕ್ತಿಯು ಶಿರವಾಳ ಗ್ರಾಮದಿಂದ ಅಣಬಿ ಕಡೆಗೆ ತನ್ನ ದ್ವಿಚಕ್ರ ವಾಹನದಲ್ಲಿ ಮದ್ಯವನ್ನು ಸಾಗಾಣಿಕೆ ಮಾಡುವ ಕುರಿತು ಖಚಿತ ಬಾತ್ಮಿ ಬಂದಿರುತ್ತದೆ. ಸದರಿ ಬಾತ್ಮಿಯ ಬಗ್ಗೆ ತಾನು ಚಾಸಾ-4 ಮತ್ತು ಚಾಸಾ-5 ರವರಿಗೆ ತಿಳಿಸಿರುತ್ತಾನೆ. ನಂತರ ತಾನು ಚಾಸಾ-4 ಮತ್ತು 5 ರವರು ಸೇರಿಕೊಂಡು ಶಿರವಾಳ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಚಾಸಾ-2 ಮತ್ತು 3

ರವರನ್ನು ಪರಿಚಯ ಮಾಡಿಕೊಂಡು ಸದರಿ ಪ್ರಕರಣದಲ್ಲಿ ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಪಂಚರು ಹಾಗೂ ಚಾಸಾ-4 ಮತ್ತು 5 ಹಾಗೂ ತಾನು ಎಲ್ಲರೂ ಸೇರಿಕೊಂಡು ಮುಡಬೋಳ ಕ್ರಾಸ್ ಹತ್ತಿರ ವಾಹನಕ್ಕಾಗಿ ಕಾಯುತ್ತಾ ನಿಂತಾಗ ತಮ್ಮ ಎದುರುಗಡೆಯಿಂದ ಕೆಂಪು ಬಣ್ಣದ ಒಂದು ದ್ವಿಚಕ್ರ ವಾಹನ ಬರುತ್ರಿರುವುದು ಕಂಡು ಬಂದಿದು ತಾವು ಸದರಿ ವಾಹನವನ್ನು ನಿಲ್ಲಿಸುವಂತೆ ಕೈ ಮಾಡಿದಾಗ ಆ ವ್ಯಕ್ತಿಯು ತಮ್ಮನ್ನು ನೋಡಿ ದ್ವಿಚಕ್ರ ವಾಹನವನ್ನು ನಿಲ್ಲಿಸಿರುತ್ತಾನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-07. ಪ್ರಾಸಾ-6 ರವರು ಮುಂದುವರೆದು, ತಮಗೆ ಅನುಮಾನ ಬಂದು ವಾಹನದ ಹತ್ತಿರ ಹೋಗಿ ತಾನು ಚಾಸಾ-2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಶೋಧನಾ ಪತ್ರವನ್ನು ತಯಾರಿಸಿ ವಾಹನವನ್ನು ಪರಿಶೀಲನೆ ಮಾಡಿದಾಗ ಅದು ಕೆಂಪು ಬಣ್ಣದ ಯಮಹಾ ಜಿ.ಎಸ್ ಕೆಎ-32-+ಡಬ್ಲೂ5474 ಕಂಡು ಬಂದಿದ್ದು ನಂತರ ದ್ವಿಚಕ್ರ ವಾಹನದ ಹಿಂದಿನ ಸೀಟಿನ ಮೇಲೆ ಒಂದು ಬಿಳಿ ಪ್ಲಾಸ್ಟಿಕ ಚೀಲ ಕಂಡು ಬಂದಿದ್ದು ಅದರಲ್ಲಿ 90 ಎಂ.ಎಲ್ ನ ಒ.ಸಿ.192 ಟೆಟ್ರಾ ಪಾಕೆಟಗಳು ಕಂಡು ಬಂದಿದ್ದು ಆರೋಪಿತನನ್ನು ಸದರಿ ಟೆಟ್ರಾ ಪಾಕೆಟಗಳನ್ನು ಸಾಗಾಣಿಕೆ ಮಾಡಲು ಯಾವುದಾದರು ಪರವಾನಿಗೆ ಇದೆ ಎಂದು ಕೇಳಿದಾಗ ಆರೋಪಿತನು ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲದೇ ಇರುವುದು ತಿಳಿಸಿರುತ್ತಾನೆ. ನಂತರ ಚಾಸಾ-1 ರವರು ಸ್ಥಳದಲ್ಲಿದ್ದ ಎಲ್ಲ ಟೆಟ್ರಾ ಪಾಕೆಟಗಳನ್ನು ಜಪ್ತಿ ಪಡಿಸಿಕೊಂಡು ಅದರಲ್ಲಿರಾಸಾಯನಿಕ ಪರಿಕ್ಷೆಗಾಗಿ 26 ಟೆಟ್ರಾ ಪಾಕೆಟಗಳನ್ನು ತೆಗೆದುಕೊಂಡು ಅದಕ್ಕೆ ಬಪಿಚಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗ ಸೀಲ 630 ರಿಂದ ಮದ್ರೆ ಹಾಕಿ ತಾನು ಮತ್ತು ಪಂಚರ ಸಮಕ್ಷಮ ಮಾದರಿ ಮುದ್ರೆಯನ್ನು ತಯಾರಿಸಿ ತಮ್ಮ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-08. ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರ-09. ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂU+0020 ಹೇಳುವುದು ಇದೆಯಾ?

ಉತ್ತರಃ

(ಈ ಮೇಲೆ ಹೇಳಿದ ಎಲ್ಲಾ ಸಾಕ್ಷಿಗಳ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃದೀಕರಿಸಲಾಯಿತು.)

ದಿನಾಂಕಃ
ಸ್ಥಳಃ ಶಹಾಪೂರ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ಶಹಾಪೂರ.